**:: COMPROMISE DECREE BEFORE LOK ADALATH ::**

**IN THE COURT OF THE SENIOR CIVIL JUDGE AND J.M.F.C. H.D.KOTE**

**O.S. NO: 239/2025**

**Plaintiff/s:** ಕರ್ನಾಟಕ ಗ್ರಾಮೀಣ ಬ್ಯಾಂಕ್
ಪ್ರಧಾನ ಕಚೇರಿ:ನಂ.32,ಸಂಗನಕಲ್ ರಸ್ತೆ,ಗಾಂಧಿನಗರ
ಬಳ್ಳಾರಿ-583103,ಪ್ರಾದೇಶಿಕ ಗ್ರಾಮೀಣ
ಬ್ಯಾಂಕ್ ಕಾಯಿದೆ-1976 ರಂತೆ ಪ್ರತಿನಿಧಿಸುವವರು
ವ್ಯವಸ್ಥಾಪಕರು, ಕರ್ನಾಟಕ ಗ್ರಾಮೀಣ ಬ್ಯಾಂಕ್
ಬೀಚನಹಳ್ಳಿ ಶಾಖೆ, ಹೆಚ್.ಡಿ.ಕೋಟೆ ತಾಲ್ಲೂಕು,
ಮೈಸೂರು ಜಿಲ್ಲೆ.

(By Smt. **Shantha**.,
Advocate for plaintiff)

ವಿರುದ್ಧ

**Defendant/s :** **1.** ಮುತ್ತಾಲಮ್ಮ ಕೋಂ ಗೋವಿಂದಶೆಟ್ಟಿ
ವಯಸ್ಸು ಸುಮಾರು 74 ವರ್ಷ,

2. ರವಿ ಬಿನ್ ಗೋವಿಂದಶೆಟ್ಟಿ
ವಯಸ್ಸು ಸುಮಾರು 44 ವರ್ಷ

3. ರಮೇಶ ಬಿನ್ ಗೋವಿಂದಶೆಟ್ಟಿ
ವಯಸ್ಸು ಸುಮಾರು 42 ವರ್ಷ

4. ಭಾಗ್ಯಮ್ಮ ಬಿನ್ ಗೋವಿಂದಶೆಟ್ಟಿ
ವಯಸ್ಸು ಸುಮಾರು 40 ವರ್ಷ

5. ವೆಂಕಟರಮಣಶೆಟ್ಟಿ ಬಿನ್ ರಾಮಶೆಟ್ಟಿ
ವಯಸ್ಸು ಸುಮಾರು 50 ವರ್ಷ
ಎನ್.ಬೇಗೂರು ಗ್ರಾಮ, ಅಂತರಸಂತೆ ಹೋಬಳಿ
ಹೆಚ್.ಡಿ.ಕೋಟೆ ತಾಲ್ಲೂಕು,ಮೈಸೂರು ಜಿಲ್ಲೆ.

( Party in person Defendant No. 1
present. and Defendant No. 2 to 4

are exparte. Defendant No. 5 is dead)

**<u>SUIT FILED ON: 01.12.2025</u>**

**Suit claim:** The plaintiff bank most humbly prays that this honorable court be pleased to pass a judgment and decree in favor of the plaintiff bank and against the defendants and direct the defendants to pay a sum of rs. 15,35,840/- together with interest to till the date of realization together with court costs and such other reliefs as this honorable court be deems fit to grant under the circumstances of the above case in the interest of justice and equity.

Plaintiff, defendants and their respective counsels have filed a Compromise petition on 14.03.2026 before this court. Hence this case came before the Lok-Adalath on 14th day of March, 2026 for final disposal in the presence of **Judicial conciliator Sri. Mahesh B.T., B.com., LLM., Senior Civil Judge & J.M.F.C, H.D.Kote**, and **non-judicial conciliator Sri Kumar** in the presence of Sri. **Shantha., advocate for the plaintiff** and **Party in person defendant No.1 present. Defendant No. 1 to 4 are exparte and defendant No. 5 is dead.** The following order was passed.

The case is called before Lok-adalath. Parties and their respective counsels are present and have settled the matter

amicably and filed a compromise petition U/O 23 Rule 3 of CPC and its contents are read over and explained to the parties in the language known to them and have agreed and accepted the terms and conditions of the compromise petition which seems to be lawful and voluntarily one. Therefore, the compromise petition is accepted and the suit is decreed in terms of compromise petition.

ದಿವಾನಿ ಪ್ರಕ್ರಿಯಾ ಸಂಹಿತೆ ಕಮಾದೇಶ**-23,**ನಿಯಮ**-3** ರ ಅಡಿಯಲ್ಲಿ ಸಲ್ಲಿಸಲ್ಪಾದ ಅರ್ಜಿ**.-**

ವಾದಿ ಮತ್ತು ಪ್ರತಿವಾದಿಗಳು ಘನನ್ಯಾಯಾಲಯದಲ್ಲಿ ಪ್ರಾರ್ಥಿಸಿಕೊಳ್ಳುವುದೇನೆಂದರೆ,

1. ವಾದಿಯ ಬ್ಯಾಂಕ್ ಪ್ರತಿವಾದಿಯರ ವಿರುದ್ಧ ಸಾಲದ ವಸೂಲಾತಿ ಕೋರಿ ಈ ದಾವೆಯನ್ನು ಹೂಡಿರುತ್ತಾರೆ.ಪ್ರತಿವಾದಿಯರು ವಾದಿಯ ಬ್ಯಾಂಕ್‌ನಿಂದ ದಿನಾಂಕ: 29-10-2015 ರಂದು 4,00,000/-ರೂಗಳನ್ನು ತಮ್ಮ ಹಳೆ ಖಾತೆ ನಂ.85034515588, ಹೊಸ ಖಾತೆ ನಂ.42040326005215 ರ ಮೂಲಕ ಸಾಲ ಪಡೆದಿರುತ್ತಾರೆ. ಸದರಿ ಸಾಲದ ಹಣಕ್ಕೆ ವಾರ್ಷಿಕ ಶೇ.12.75 ರಂತೆ ಬಡ್ಡಿಯನ್ನು ಹಾಗೂ ಬ್ಯಾಂಕಿನಿಂದ ಕಾಲಕಾಲಕ್ಕೆ ಬದಲಾಗುವ/ನಿಗಧಿಯಾಗುವ ಬ್ಯಾಂಕಿನ ಬಡ್ಡಿಯ ದರವನ್ನು ಸೇರಿಸಿ, ಮರುಪಾವತಿ ಮಾಡುವುದಾಗಿ ಬ್ಯಾಂಕಿನ ಕರಾರು ಮತ್ತು ನಿಬಂಧನೆಗಳಿಗೆ ಒಪ್ಪಿ, ಮೇಲ್ಕಂಡ ಹಣವನ್ನು ಸಾಲವಾಗಿ ಪಡೆದಿದ್ದು,ಬ್ಯಾಂಕಿಗೆ ದಾಖಲಾತಿಗಳನ್ನು ಬರೆದುಕೊಟ್ಟಿರುತ್ತಾರೆ. ಹಾಗೂ ಮೇಲ್ಕಂಡ ಸಾಲದ ಭದ್ರತೆಗಾಗಿ ಪ್ರತಿವಾದಿಯರು ಷೆಡ್ಯೂಲ್ ಆಸ್ತಿಯನ್ನು ಅಡಮಾನ ಮಾಡಿದ್ದು, ದಿನಾಂಕ:28-10-2015 ರಂದು ಅಡಮಾನಪತ್ರ ಬರೆದುಕೊಟ್ಟಿದ್ದು,ಸದರಿ ಅಡಮಾನಪತ್ರವು ಹೆಚ್.ಡಿ.ಕೋಟೆ ಉಪ-ನೊಂದಣಾ ಕಚೇರಿಯಲ್ಲಿ ನೊಂದಾಯಿಸಲ್ಪಟ್ಟಿರುತ್ತದೆ. ವಾದಿಯು ಮೇಲ್ಕಂಡ ಸಾಲವನ್ನು ಪಾವತಿಸುವಂತೆ ಕೇಳಿಕೊಂಡಾಗ ಪ್ರತಿವಾದಿಯರು ಮೇಲ್ಕಂಡ ಸಾಲವನ್ನು ಪಾವತಿಸುವುದಾಗಿ ಒಪ್ಪಿ, ದಿನಾಂಕ:22-10-2018 ರಂದು ಅಕ್ನಾಲೆಡ್ಜ್‌ಮೆಂಟ್ ಆಫ್

ಲಯಬಲಿಟಿಯನ್ನೂ,ದಿನಾಂಕ: 19-04-2021, ದಿನಾಂಕ:12-10-2023 ರಂದು ಲೇಟರ್ ಆಫ್ ರಿವಿವಲ್ ಪತ್ರಗಳನ್ನು ಬ್ಯಾಂಕಿಗೆ ಬರೆದುಕೊಟ್ಟಿರುತ್ತಾರೆ. ಹಾಗೂ ಮೇಲ್ಕಂಡ ಸಾಲವನ್ನು ಪಾವತಿಸುವಂತೆ ಬ್ಯಾಂಕಿನವರು ದಿನಾಂಕ:28-03-2025 ರಂದು ಪ್ರತಿವಾದಿಗಳಿಗೆ ನೋಟೀಸ್ ನೀಡಿದ್ದು,ಸದರಿ ನೋಟೀಸಿಗೆ ಪ್ರತಿವಾದಿಯರು ಯಾವುದೇ ಉತ್ತರ ನೀಡಿರುವುದಿಲ್ಲ ಹಾಗೂ ಸಾಲವನ್ನು ಸಹ ಪಾವತಿಸಿರುವುದಿಲ್ಲ. ಮೇಲ್ಕಂಡ 4,00,000/- ರೂಪಾಯಿಗಳ ಸಾಲದ ಬಾಬು ಅಸಲು ಮತ್ತು ಬಡ್ಡಿ ಸೇರಿಸಿ, ದಿನಾಂಕ:01-07-2025 ಕ್ಕೆ 10,07,904/- ರೂಗಳನ್ನು ಬ್ಯಾಂಕಿಗೆ ಪ್ರತಿವಾದಿಯರು ಪಾವತಿಸಬೇಕಾಗಿರುತ್ತದೆ.

2. ಪ್ರತಿವಾದಿಯರು ವಾದಿಯ ಬ್ಯಾಂಕ್‌ನಿಂದ ದಿನಾಂಕ: 17-05-2014 ರಂದು 1,76,000/- ರೂಗಳನ್ನು ತಮ್ಮ ಹಳೆ ಖಾತೆ ನಂ.85019121310,ಹೊಸ ಖಾತೆ ನಂ.42040326001614 ರ ಮೂಲಕ ಸಾಲ ಪಡೆದಿರುತ್ತಾರೆ. ಸದರಿ ಸಾಲದ ಹಣಕ್ಕೆ ವಾರ್ಷಿಕ ಶೇ.12.75 ರಂತೆ ಬಡ್ಡಿಯನ್ನು ಹಾಗೂ ಬ್ಯಾಂಕಿನಿಂದ ಕಾಲಕಾಲಕ್ಕೆ ಬದಲಾಗುವ/ ನಿಗಧಿಯಾಗುವ ಬ್ಯಾಂಕಿನ ಬಡ್ಡಿಯ ದರವನ್ನು ಸೇರಿಸಿ, ಮರುಪಾವತಿ ಮಾಡುವುದಾಗಿ ಬ್ಯಾಂಕಿನ ಕರಾರು ಮತ್ತು ನಿಬಂಧನೆಗಳಿಗೆ ಒಪ್ಪಿ, ಮೇಲ್ಕಂಡ ಹಣವನ್ನು ಸಾಲವಾಗಿ ಪಡೆದಿದ್ದು,ಬ್ಯಾಂಕಿಗೆ ದಾಖಲಾತಿಗಳನ್ನು ಬರೆದುಕೊಟ್ಟಿರುತ್ತಾರೆ. ಹಾಗೂ 5 ನೇಪ್ರತಿವಾದಿಯು ಜಾಮೀನುಪತ್ರ ಬರೆದುಕೊಟ್ಟಿರುತ್ತಾರೆ.ಮೇಲ್ಕಂಡ ಸಾಲದ ಭದ್ರತೆಗಾಗಿ ಪ್ರತಿವಾದಿಯರು ಷೆಡ್ಯೂಲ್ ಆಸ್ತಿಯನ್ನು ಅಡಮಾನ ಮಾಡಿದ್ದು, ದಿನಾಂಕ:13-05-2014 ರಂದು ಆಡಮಾನ ಮಾಡಿದ್ದು,ಸದರಿ ಆಡಮಾನಪತ್ರವು ಹೆಚ್.ಡಿ.ಕೋಟೆ ಉಪ-ನೊಂದಣಾ ಕಚೇರಿಯಲ್ಲಿ ನೊಂದಾಯಿಸಲ್ಪಟ್ಟಿರುತ್ತದೆ. ವಾದಿಯು ಮೇಲ್ಕಂಡ ಪಾವತಿಸುವಂತೆ ಕೇಳಿಕೊಂಡಾಗ ಪ್ರತಿವಾದಿಯರು ಮೇಲ್ಕಂಡ ಸಾಲವನ್ನು ಪಾವತಿಸುವುದಾಗಿ ಒಪ್ಪಿ, ದಿನಾಂಕ:12-05-2017, ದಿನಾಂಕ:07-05-2020 ಮತ್ತು ದಿನಾಕ:03-05-2023 ರಂದು ಲೆಟರ್ ಆಫ್ ರಿವಿವಲ್ ಪತ್ರಗಳನ್ನು ಬ್ಯಾಂಕಿಗೆ ಬರೆದುಕೊಟ್ಟಿರುತ್ತಾರೆ. ಮೇಲ್ಕಂಡ 1,76,000/- ರೂಪಾಯಿಗಳ ಸಾಲದ ಬಾಬ್ತು ಆಸಲು ಮತ್ತು ಬಡ್ಡಿ ಸೇರಿಸಿ, ದಿನಾಂಕ:30-09-2025 ಕ್ಕೆ 3,86,688/- ರೂಗಳನ್ನು ಬ್ಯಾಂಕಿಗೆ ಪ್ರತಿವಾದಿಯರು ಪಾವತಿಸಬೇಕಾಗಿರುತ್ತದೆ.

3. ಪ್ರತಿವಾದಿಯರು ವಾದಿಯ ಬ್ಯಾಂಕ್‌ನಿಂದ ದಿನಾಂಕ: 04-02-2014 ರಂದು 2,52,000/- ರೂಗಳನ್ನು ತಮ್ಮ ಹಳೆ ಖಾತೆ ನಂ.85017046842,ಹೊಸ ಖಾತೆ ನಂ.42040130000140 ರ ಮೂಲಕ ಸಾಲ ಪಡೆದಿರುತ್ತಾರೆ. ಸದರಿ ಸಾಲದ ಹಣಕ್ಕೆ ವಾರ್ಷಿಕ ಶೇ.12.75 ರಂತೆ ಬಡ್ಡಿಯನ್ನು ಹಾಗೂ ಬ್ಯಾಂಕಿನಿಂದ ಕಾಲಕಾಲಕ್ಕೆ ಬದಲಾಗುವ/ ನಿಗಧಿಯಾಗುವ ಬ್ಯಾಂಕಿನ ಬಡ್ಡಿಯ ದರವನ್ನು ಸೇರಿಸಿ, ಮರುಪಾವತಿ ಮಾಡುವುದಾಗಿ ಬ್ಯಾಂಕಿನ ಕರಾರು ಮತ್ತು ನಿಬಂಧನೆಗಳಿಗೆ ಒಪ್ಪಿ, ಮೇಲ್ಕಂಡ ಹಣವನ್ನು ಸಾಲವಾಗಿ ಪಡೆದಿದ್ದು,ಬ್ಯಾಂಕಿಗೆ ದಾಖಲಾತಿಗಳನ್ನು ಬರೆದುಕೊಟ್ಟಿರುತ್ತಾರೆ. ಹಾಗೂ 5 ನೇಪ್ರತಿವಾದಿಯು ಜಾಮೀನುಪತ್ರ ಬರೆದುಕೊಟ್ಟಿರುತ್ತಾರೆ.ಮೇಲ್ಕಂಡ ಸಾಲದ ಭದ್ರತೆಗಾಗಿ ಪ್ರತಿವಾದಿಯರು ಷೆಡ್ಯೂಲ್ ಆಸ್ತಿಯನ್ನು ಆಡಮಾನ ಮಾಡಿದ್ದು, ದಿನಾಂಕ:16-01-2014 ರಂದು ಘೋಷಣಾಪತ್ರವನ್ನು ಬರೆದುಕೊಟ್ಟಿರುತ್ತಾರೆ. ಮೇಲ್ಕಂಡ ಸಾಲವನ್ನು ಪಾವತಿಸುವಂತೆ ಕೇಳಿಕೊಂಡಾಗ ಪ್ರತಿವಾದಿಯರು ಮೇಲ್ಕಂಡ ಸಾಲವನ್ನು ಪಾವತಿಸುವುದಾಗಿ ಒಪ್ಪಿ, ದಿನಾಂಕ:01-02-2017 ರಂದು ಲೇಟರ್ ಆಫ್ ಕಮಿಟ್‌ಮೆಂಟ್‌ನ್ನೂ, ದಿನಾಂಕ:28-01-2020 ಮತ್ತು ದಿನಾಂಕ:01-01-2023 ಮತ್ತು ದಿನಾಂಕ:23-07-2025 ಲೆಟರ್ ಆಫ್ ರಿವಿವಲ್ ಪತ್ರಗಳನ್ನು ಬ್ಯಾಂಕಿಗೆ ಬರೆದುಕೊಟ್ಟಿರುತ್ತಾರೆ. ಮೇಲ್ಕಂಡ 1,76,000/- ರೂಪಾಯಿಗಳ ಸಾಲದ ಬಾಬು ಅಸಲು ಮತ್ತು ಬಡ್ಡಿ ಸೇರಿಸಿ, ದಿನಾಂಕ:01-07-2025 ಕ್ಕೆ 1,62,587/- ರೂಗಳನ್ನು ಬ್ಯಾಂಕಿಗೆ ಪ್ರತಿವಾದಿಯರು ಪಾವತಿಸಬೇಕಾಗಿರುತ್ತದೆ

4. ಪ್ರತಿವಾದಿಯರು ಮೇಲ್ಕಂಡ ಸಾಲಗಳನ್ನು ಪಡೆದುಕೊಂಡ ನಂತರ, ವಾದಿಯ ಬ್ಯಾಂಕಿಗೆ ಬ್ಯಾಂಕಿನ ಷರತ್ತು ಮತ್ತು ನಿಭಂದನೆಗಳಂತೆ ಇದುವರೆವಿಗೂ ಯಾವುದೇ ಸಾಲದ ಹಣವನ್ನಾಗಲಿ, ಬಡ್ಡಿಯನ್ನಾಗಲಿ ಮರುಪಾವತಿ ಮಾಡಿರುವುದಿಲ್ಲ. ಪ್ರತಿವಾದಿಗಳಿಗೆ ಬ್ಯಾಂಕ್ ಸಾಕಷ್ಟು ಕಾಲಾವಕಾಶಗಳನ್ನು ನೀಡಿದ್ದರೂ ಸಹ ಪ್ರತಿವಾದಿಗಳು ಬ್ಯಾಂಕಿಗೆ ಮೇಲ್ಕಂಡ ಸಾಲದ ಹಣವನ್ನು ಪಾವತಿಸಿರುವುದಿಲ್ಲ. ವಾದಿಯ ಬ್ಯಾಂಕಿನವರು ಹಲವಾರು ಭಾರಿ ಪ್ರತಿವಾದಿಯರನ್ನು ಖುದ್ದಾಗಿ, ಮತ್ತು ದಿನಾಂಕ:28-03-2025 ರಂದು ವಕೀಲರ ಮೂಲಕ ನೋಟೀಸ್ ನೀಡಿ ಸಾಲದ ಹಣ ಮತ್ತು ಬಡ್ಡಿಯನ್ನು ಮರುಪಾವತಿಸುವಂತೆ

ಕೇಳಿಕೊಂಡರೂ ಸಹ, ಪ್ರತಿವಾದಿಗಳು ಬ್ಯಾಂಕಿಗೆ ಮೋಸ ಮಾಡುವ ದುರುದ್ದೇಶದಿಂದ ಸಾಲದ ಹಣವನ್ನಾಗಲಿ, ಬಡ್ಡಿಯನ್ನಾಗಲಿ ಮರುಪಾವತಿ ಮಾಡಿರುವುದಿಲ್ಲ. ಆದ್ದರಿಂದ ವಾದಿಯು ಸಾಲದ ವಸೂಲಾತಿಗಾಗಿ ಈ ದಾವೆಯನ್ನು ಘನನ್ಯಾಯಾಲಯದ ಮುಂದೆ ತಂದಿರುತ್ತಾರೆ.

5. ಮೇಲ್ಕಂಡ ಸಾಲಗಳ ಬಾಬು ಪ್ರತಿವಾದಿಯರು 15,35,840/- ರೂಗಳನ್ನು ವಾದಿಯ ಬ್ಯಾಂಕ್‌ಗೆ ಪಾವತಿಸಬೇಕಾಗಿರುತ್ತದೆ. ಮೇಲ್ಕಂಡ ದಾವೆಯಲ್ಲಿ ವಾದಿಯ ಬ್ಯಾಂಕ್ ಮತ್ತು 1 ನೇಪ್ರತಿವಾದಿ ಸಂಧಾನಕಾರರ ಮತ್ತು ಹಿತೈಷಿಗಳ ಹಿತವಚನದ ಮೇರೆಗೆ ಜನತಾ ನ್ಯಾಯಾಲಯದಲ್ಲಿ ಎಂಟು ಲಕ್ಷದ ಇಪ್ಪತ್ತೈದು ಸಾವಿರ (8,25,000/-) ರೂಗಳಿಗೆ ಒನ್ ಟೈಂ ಸೆಟ್ಲಮೆಂಟ್ ಮಾಡಿಕೊಂಡಿದ್ದು, ಸದರಿ ಎಂಟು ಲಕ್ಷದ ಇಪ್ಪತ್ತೈದು ಸಾವಿರ (8,25,000/-) ರೂಗಳನ್ನು 1 ನೇಪ್ರತಿವಾದಿಯು ವಾದಿಯ ಬ್ಯಾಂಕ್‌ಗೆ ಪಾವತಿಸಿರುತ್ತಾರೆ.

ಆದ್ದರಿಂದ ವಾದಿಯ ಬ್ಯಾಂಕ್ ಮತ್ತು 1 ನೇಪ್ರತಿವಾದಿಯು ಘನನ್ಯಾಯಾಲಯದಲ್ಲಿ ಪ್ರಾರ್ಥಿಸಿಕೊಳ್ಳುವುದೇನೆಂದರೆ, ಮೇಲ್ಕಂಡ ದಾವೆಯಲ್ಲಿ ವಾದಿಯ ಬ್ಯಾಂಕ್ ಪಾವತಿಸಿರುವ ಘನ ನ್ಯಾಯಾಲಯದ ಶುಲ್ಕವನ್ನು ವಾಪಸ್ಸು ಪಡೆಯಲು ಆದೇಶಿಸಿ, ಈ ದಾವೆಯನ್ನು ಮುಕ್ತಾಯ ಮಾಡಬಹುದೆಂದು ನ್ಯಾಯ ಮತ್ತು ಧರ್ಮದ ದೃಷ್ಠಿಯಿಂದ ಪಾರ್ದಿಸಿಕೊಳ್ಳುತ್ತಾರೆ.

And it is further ordered that, the compromise petition filed by the parties is part and parcel of the compromise decree.

And it is further ordered that, office is directed to return the Court Fee to the plaintiff.

Given under my hand and seal of this Court on the 14th day of March, 2026.

SENIOR CIVIL JUDGE & JMFC
H.D.KOTE.

## SCHEDULE

1.ಮೈಸೂರು ಜಿಲ್ಲೆ ಹೆಚ್.ಡಿ.ಕೋಟೆ ತಾಲ್ಲೂಕು, ಅಂತರಸಂತೆ ಹೋಬಳಿ,ಎನ್.ಬೇಗೂರು ಗ್ರಾಮದ ಸರ್ವೆ ನಂ.46/77 ರಲ್ಲಿರುವ 2-00 ಎಕರೆ ಜಮೀನಿಗೆ ಒಂದೇ ಚಕ್ಕುಬಂಧಿ:-

| | | |
|---|---|---|
| ಪೂರ್ವಕ್ಕೆ | : | ಗ್ರಾಮಠಾಣಾ |
| ಪಶ್ಚಿಮಕ್ಕೆ | : | ನೀರು ಹರಿಯುವ ಕೊಲ್ಲಿ |
| ಉತ್ತರಕ್ಕೆ | : | ಮಹದೇವಶೆಟ್ಟಿ ಜಮೀನು |
| ದಕ್ಷಿಣಕ್ಕೆ | : | ಮಹದೇವಶೆಟ್ಟಿರವರ ಜಮೀನು |

2. ಮೈಸೂರು ಜಿಲ್ಲೆ,ಹೆಚ್.ಡಿ.ಕೋಟೆ ತಾಲ್ಲೂಕು, ಅಂತರಸಂತೆ ಹೋಬಳಿ,ಎನ್.ಬೇಗೂರು ಗ್ರಾಮದ ಸರ್ವೆ ನಂ.46/79 ರಲ್ಲಿರುವ 4-00 ಎಕರೆ ಜಮೀನಿಗೆ ಒಂದೇ ಚಕ್ಕುಬಂಧಿ:-

| | | |
|---|---|---|
| ಪೂರ್ವಕ್ಕೆ | : | ಗ್ರಾಮಠಾಣಾ |
| ಪಶ್ಚಿಮಕ್ಕೆ | : | ಕೊಲ್ಲಿ |
| ಉತ್ತರಕ್ಕೆ | : | ಗೋವಿಂದಶೆಟ್ಟಿ ಜಮೀನು |
| ದಕ್ಷಿಣಕ್ಕೆ | : | ಮಹದೇವಶೆಟ್ಟಿರವರ ಜಮೀನು |

**MEMORANDUM OF COST INCURRED IN THE SUIT**

| | **Plaintiff/s** | **Defendant/s** |
|---|---|---|
| 1. Court fee on Plaint | 88740-00 | -- |
| 2. Service of Process | 30-00 | -- |
| 3. Advocate fee | -- | -- |
| **TOTAL** | **88770-00** | **--** |

SENIOR CIVIL JUDGE & JMFC
H.D.KOTE.